**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಗೋಕಾಕ**

**ಸಿ.ಸಿ. ನಂ. 1935/2023**

| | |
|---|---|
| ಪಿರ್ಯಾದುದಾರರುಃ | ಗೋಕಾಕ ಟೆಕ್ಸಟೈಲ್ಸ ಲಿ,<br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು<br>ವ್ಯವಸ್ಥಾಪಕರು ಮತ್ತು ಪಿ ಎ ಓಲ್ಡರ್, ಗೋಕಾಕ<br>ಫಾಲ್ಸ್ ,<br>ಪ್ರತಿನಿಧಿಸುವವರುಃ ಶ್ರೀ ರಮೇಶ ಆರ್ ಪಾಟೀಲ |

**- ವಿರುದ್ಧ -**

| | |
|---|---|
| ಆರೋಪಿ : | ಲಕ್ಷ್ಮಣ ಬಸವಂತ ಕಲ್ಲಿಮನಿ<br>ಸಾಃ ಕ್ವಾಟರ್ಸ ನಂ.**26/08,**<br>ಗೋಕಾಕ ಪಾಲ್ಸ್ **,** ತಾಃ ಗೋಕಾಕ**,** ಜಿ. ಬೆಳಗಾವಿ |

**ಆಪಾದನೆ**

**ಶ್ರೀ ರಾಜೀವ ಗೋಳಸಾರ, ಬಿ.ಎ., ಎಲ್.ಎಲ್.ಎಂ., ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿ, ಗೋಕಾಕ,** ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆಪಾದನೆ ಮಾಡುತ್ತಿದ್ದೇನೆಃ

ಪಿರ್ಯಾದಿದಾರರ ಕಂಪನಿಯು ಅಧಿನಿಯಮದ ಕೆಳಗಡೆ ನೊಂದಣಿಯಾಗಿದ್ದು, ಹೀಗಿರುವಾಗ ಆರೋಪಿಯಾದ ನೀವು ಗೋಕಾಕ ಟೆಕ್ಸಟೈಲ್ಸ್ ನಲ್ಲಿ ನೇಮಕಾತಿಯಾಗಿರುವುದರಿಂದ ಪಿರ್ಯಾದುದಾರರ ಟೆಕ್ಸಟೈಲ್ಸ್ ಕಂಪನಿಯಲ್ಲಿ ದಿನಾಂಕ15-07-1973ರಂದು ಕೆಲಸ ನಿರ್ವಹಿಸುತ್ತಿರುವುದರಿಂದ ಕಂಪನಿಯು ಆರೋಪಿಯಾದ ನಿಮಗೆ ವಸತಿ ಗೃಹ ನಂ.26/8 ಗೋಕಾಕ ಫಾಲ್ಸ (26/08 ಫಾರಂ.3 ಟಿ ಎಂ ಸಿ ಕೊಣ್ಣೂರು) ನಿವೇಶನವನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಿದ್ದು, ನಂತರ ಆರೋಪಿಯಾದ ನೀವು ಸದರಿ ವಸತಿ ಗೃಹದಲ್ಲಿ ವಾಸವಾಗಿರುತ್ತೀರಿ,

ಮುಂದುವರೆದು ಆರೋಪಿಯಾದ ನೀವು ದಿನಾಂಕ30-12-2016ರಂದು ಕೆಲಸಕ್ಕೆ ರಾಜಿನಾಮೆಕೊಟ್ಟಿರುವುದರಿಂದ ಪಿರ್ಯಾದುದಾರರ ಕಂಪನಿಯ ನಿಯಮದಂತೆ ಕಂಪನಿಯ ವಸತಿಗೃಹ ನಂ.26/08 ಗೋಕಾಕ ಫಾಲ್ಸ (26/08 ಫಾರಂ.3 ಟಿ ಎಂ ಸಿ ಕೊಣ್ಣೂರು) ನಿವೇಶನದಲ್ಲಿ ವಾಸಮಾಡುವಂತಿಲ್ಲ. ಹೀಗಾಗಿ ಪಿರ್ಯಾದುದಾರರ ಪರ ವಕೀಲರು ದಿನಾಂಕ 14-12-2016ರಂದು ನೋಟಿಸನ್ನು ನೀಡಿದ್ದರೂ ಸಹ ಸದರಿ ವಸತಿಗೃಹದಲ್ಲಿ ಆರೋಪಿಯಾದ

ನೀವು ವಾಸವಾಗಿದ್ದು, ಆ ಮೂಲಕ ಕಂಪನಿ ಕಾಯಿದೆಯ  ಕಲಂ 452(2)ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿರುತ್ತದೆ.

ಪ್ರಶ್ನೆಃ1- ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?
ಉತ್ತರಃ

ಪ್ರಶ್ನೆಃ2-ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?
ಉತ್ತರಃ

(ದಿನಾಂಕ 23-09-2024ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಕನ್ನಡ ಭಾಷೆಯಲ್ಲಿ ಆರೋಪವನ್ನು ಓದಿ, ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಡೀಕರಿಸಿದೆ)

**(ರಾಜೀವ ಗೋಳಸಾರ)**
**ಪ್ರಧಾನ ಪ್ರ.ದ.ನ್ಯಾ. ದಂ, ಗೋಕಾಕ.**